(ಇಂದು ದಿನಾಂಕ:18-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ಶ್ರೀ ಕೆ ವಿ ಜಿ ವಕೀಲರಿಂದ:**

6. ನನ್ನ ಜಮೀನಿನ ಪಹಣಿ ತಿದ್ದುಪಡಿ ಕೋರಿ 2013 ರಲ್ಲಿ ನಾನು ಕಂದಾಯ ನ್ಯಾಯಾಲಯ ಲಿಂಗಸಗೂರಿನಲ್ಲಿ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. 2016 ರಲ್ಲಿ ನನ್ನ ಮೇಲ್ಮನವಿ ವಜಾಗೊಂಡಿತು ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಅಥವಾ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ನನಗೆ ಕಂದಾಯ ನ್ಯಾಯಾಲಯ ಲಿಂಗಸಗೂರಿನಲ್ಲಿ ಸಲ್ಲಿಸಿದ ಮೇಲ್ಮನವಿ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನಾನು ಕಂದಾಯ ನ್ಯಾಯಾಲಯ ಲಿಂಗಸಗೂರಿನಲ್ಲಿ ಮೇಲ್ಮನವಿ ಸಲ್ಲಿಸಿದ್ದು ನ್ಯಾಯಾಲಯದ ವಿಚಾರಣೆಗೆ ನಾನು ಹೋಗಿಲ್ಲ. ಅದರ ಬಗ್ಗೆ ನಾನು ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ. ನನಗೆ ಕಂದಾಯ ನ್ಯಾಯಾಲಯ ಲಿಂಗಸಗೂರಿನಲ್ಲಿ ಸಲ್ಲಿಸಿದ ಮೇಲ್ಮನವಿ ವಿಲೇವಾರಿಯಾದ 6 ತಿಂಗಳ ನಂತರ ನನಗೆ ಅದರ ಬಗ್ಗೆ ಗೊತ್ತಾಯಿತು. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನಗರ ಯೋಜನೆ ಪ್ರಾಧಿಕಾರ ಸಿಂಧನೂರ ದಿಂದ ಪತ್ರಿಕಾ ಪ್ರಕಟಣೆ ಬಂದಿತ್ತು ಸರ್ವೇ ನಂ.4 ರಲ್ಲಿ 6 ಎಕರೆ ಬದಲಾಗಿ 4 ಎಕರೆ ಇತ್ತು ಆವಾಗ ನನಗೆ ವಿವಾದದ ಬಗ್ಗೆ ಗೊತ್ತಾಯಿತು. ಸದರಿ ದಿನಪತ್ರಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನಗೆ ಎಲ್ಲ ವಿಷಯ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಕೀಲರ ಮುಖಾಂತರ ಸದರಿ ಮೇಲ್ಮನವಿ ಆದೇಶ ನನಗೆ ರವಾನಿಸಲಾಗಿದೆ, ಅದರ ಬಗ್ಗೆ ನನಗೆ ಸಂಪೂರ್ಣ ವಿಷಯ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು ಸರ್ವೇ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ತಹಶೀಲ್ದಾರ ರವರಿಗೆ ದೂರು ಸಲ್ಲಿಸಿದ್ದೇನೆ. ನ್ಯಾಯಾಲಯದಲ್ಲಿ, ಖಾಸಗಿ ದೂರು, ಠಾಣೆಯಲ್ಲಿ ದೂರು ಸಲ್ಲಿಸಿಲ್ಲ. ಸದರಿ ಆದೇಶದ ಬಗ್ಗೆ ನಾನು ನಮ್ಮ ವಕೀಲರಿಗೆ ಹೇಳಿದ್ದೇನೆ. ದಾವೆ ಸಲ್ಲಿಸುವ ಪೂರ್ವದಲ್ಲಿ

ನಾನು ಅದರ ಬಗ್ಗೆ ಹೇಳಿದ್ದೇನೆ. ಕಂದಾಯ ಮೇಲ್ಮನವಿ ಬಗ್ಗೆ ನಾನು ನನ್ನ ವಾದಪತ್ರದಲ್ಲಿ ಹೇಳಿಲ್ಲ, ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ಸದರಿ ವಿಷಯದ ಬಗ್ಗೆ ಉಲ್ಲೇಖಿಸಿದ ನಂತರ ಅದರ ಬಗ್ಗೆ ನಾನು ವಾದಪತ್ರ ತಿದ್ದುಪಡಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

8. ಪ್ರತಿವಾದಿಯರು ಸುಳ್ಳು ದಾಖಲೆಯನ್ನು ಸೃಷ್ಟಿಸಿದ್ದಾರೆ ಅದರ ವಿರುದ್ಧ ನಾನು ಪರಿಹಾರವನ್ನು ಕೇಳಿದ್ದೇನೆ. ಪ್ರತಿವಾದಿಯರು 2 ಎಕರೆ 23 ಗುಂಟೆ ನನ್ನ ಜಮೀನು ತೆಗೆದುಕೊಂಡಿದ್ದಾರೆ ಅದರ ಬಗ್ಗೆ ನಾನು ಪರಿಹಾರ ಕೇಳಿದ್ದೇನೆ. 2 ಎಕರೆ 23 ಗುಂಟೆ ಜಮೀನಿನ ಚಕಬಂದಿ ದಕ್ಷಿಣಕ್ಕೆ ಶರಬಣ್ಣನ ಹೊಲದ ಉಳಿದ ಭಾಗ ನನ್ನದು, ಪಶ್ಚಿಮಕ್ಕೆ ನನ್ನ ಹೊಲ, ಪೂರ್ವಕ್ಕೆ ಹಳ್ಳ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ. ಸದರಿ ಚಕಬಂದಿ ಮಧ್ಯದಲ್ಲಿ ಇದ್ದ ಜಮೀನನ್ನು ಕೊಡಿಸಲು ನಾನು ಕೇಳಿದ್ದೇನೆ. ನನ್ನ ದಾವೆಯಲ್ಲಿ ಸದರಿ ವಿಷಯದ ಬಗ್ಗೆ ಪ್ರಸ್ತಾಪ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪರಿಹಾರ ಕೋರಿದ್ದು 2 ಎಕರೆ 23 ಗುಂಟೆ ಬಗ್ಗೆ ನನ್ನ ವಾದಪತ್ರದಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಸದರಿ ಚಕಬಂದಿ ಬಗ್ಗೆ ನನ್ನ ವಾದಪತ್ರದ ಶೆಡ್ಯೂಲ್‌ನಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡಲು ಮತ್ತು ನನ್ನ ಜಮೀನನ್ನು ಅಭಿವೃದ್ಧಿಪಡಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜೈರಾ ಖಾತುಂಬಿರವರು ಮರಣ ಹೊಂದಿ 23 ವರ್ಷಗಳಾಯಿತು. ಅವರ ಸೊಸೆ ದಾಖಲೆಯನ್ನು ಸೃಷ್ಟಿಸಿ ಅವರ ಹೆಸರಲ್ಲಿ ನೊಂದಣಿ ಖರೀದಿ ಪತ್ರ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನಾನು ನನ್ನ ವಾದಪತ್ರದಲ್ಲಿ ಹೇಳಿದ್ದೇನೆ.

9. ನಾನು ಯಾವುದೇ ವಿಷಯ ಪ್ರಸ್ತಾಪ ಮಾಡದೇ ಸುಳ್ಳು ಮಾಹಿತಿಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ರಮೇಶರವರು ಖರೀದಿ ಪತ್ರ ಸಂಖ್ಯೆ 52/2003-04 ಇದು ಕರ್ನೂಲ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಎಂದು ನಾನು ಹೇಳಿದ್ದು, ಸದರಿ ಖರೀದಿ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಅದರ ಪ್ರಕಾರ ಮ್ಯೂಟೇಶನ್ ಕೂಡಾ ಆಗಿದೆ ಎಂದರೆ ಸರಿ. ಮ್ಯೂಟೇಶನ್‌ನ್ನು **ನಿಡಿ-5** ಎಂದು ಗುರುತಿಸಲಾಯಿತು.

10. ಪದ್ಮಾವತಿ ರವರ ಖರೀದಿ ಪತ್ರ ಸಂಖ್ಯೆ 322/2003-04 ಇದು ಕರ್ನೂಲ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಎಂದು ನಾನು ಹೇಳಿದ್ದು, ಸದರಿ ಖರೀದಿ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು **ನಿಡಿ-6** ಎಂದು ಗುರುತಿಸಲಾಯಿತು. ಅದರ ಪ್ರಕಾರ ಮ್ಯೂಟೇಶನ್ ಕೂಡಾ ಆಗಿದೆ ಎಂದರೆ ಸರಿ. ಮ್ಯೂಟೇಶನ್‌ನ್ನು **ನಿಡಿ-7** ಎಂದು ಗುರುತಿಸಲಾಯಿತು. ಗೌಸಿಯಾಬೇಗಂ ಖರೀದಿ ಪತ್ರ ಸಂಖ್ಯೆ 63/2003-04 ಇದು ಕರ್ನೂಲ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಎಂದು ನಾನು ಹೇಳಿದ್ದು, ಸದರಿ ಖರೀದಿ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು **ನಿಡಿ-8** ಎಂದು ಗುರುತಿಸಲಾಯಿತು. ಅದರ ಪ್ರಕಾರ ಮ್ಯೂಟೇಶನ್ ಕೂಡಾ ಆಗಿದೆ ಎಂದರೆ ಸರಿ. ಮ್ಯೂಟೇಶನ್‌ನ್ನು **ನಿಡಿ-9** ಎಂದು ಗುರುತಿಸಲಾಯಿತು. ಲಕ್ಷ್ಮೀ ಗಂಡ ನಾಗೇಂದ್ರಪ್ಪ ಖರೀದಿ ಪತ್ರ ಸಂಖ್ಯೆ 9056/2007-08 ಇದು ಕರ್ನೂಲ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಎಂದು ನಾನು ಹೇಳಿದ್ದು, ಸದರಿ ಖರೀದಿ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು **ನಿಡಿ-10** ಎಂದು ಗುರುತಿಸಲಾಯಿತು. ಅದರ ಪ್ರಕಾರ ಮ್ಯೂಟೇಶನ್ ಕೂಡಾ ಆಗಿದೆ ಎಂದರೆ ಸರಿ. ಮ್ಯೂಟೇಶನ್‌ನ್ನು **ನಿಡಿ-11** ಎಂದು ಗುರುತಿಸಲಾಯಿತು.

11. ಪ್ರತಿವಾದಿಯರು ಮೇಲೆ ಹೇಳಿದ ವ್ಯಕ್ತಿಗಳ ಖರೀದಿ ಪತ್ರಗಳನ್ನು ಪರೀಶೀಲಿಸಿ ಅವರು ಖರೀದಿ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ಖೊಟ್ಟಿ ದಾಖಲೆ ಆಧಾರದ ಮೇಲೆ ಖರೀದಿ ಪತ್ರ ಸಂಖ್ಯೆ 9570/2010-11 ಖರೀದಿ ಮಾಡಿದ್ದಾರೆ. ಸದರಿ ದಾಖಲೆ ಖೊಟ್ಟಿ ದಾಖಲೆ ಅಂತಾ ನಾನು ಪ್ರತಿವಾದಿಯರ ವಿರುದ್ದವಾಗಲೀ ಅಥವಾ ಅವರ ಖರೀದಿದಾರರ ವಿರುದ್ದವಾಗಲೀ ಕ್ರಿಮಿನಲ್ ಕೇಸ್ ದಾಖಲಿಸಿಲ್ಲ. ಪ್ರತಿವಾದಿಯರ ಹೆಸರಲಿದ್ದ ಎರಡು ಖರೀದಿ ಪತ್ರಗಳನ್ನು **ನಿಡಿ-12 ಮತ್ತು 13** ಎಂದು ಗುರುತಿಸಲಾಯಿತು. ಮ್ಯೂಟೇಶನ್ ಪ್ರತಿಯನ್ನು **ನಿಡಿ-14** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ನಿಡಿ-12 ಮತ್ತು 13 ಪ್ರತಿವಾದಿಯರ ಹೆಸರಲ್ಲಿದ್ದ ಖರೀದಿ ಪತ್ರಗಳಲ್ಲಿ 1 ಎಕರೆ 20 ಗುಂಟೆ ಜಮೀನು ಇದ್ದು, 1

ಎಕರೆ ಪೋಟ ಖರಾಬ, ಹೀಗೆ ಒಟ್ಟು 2 ಎಕರೆ 20 ಗುಂಟೆ ಆಗುತ್ತದೆ. ನನ್ನ ಜಮೀನು ಕಡಿಮೆಯಾಗಿ ಸದರಿ ಖರೀದಿ ಪತ್ರಗಳಲ್ಲಿ ಪ್ರತಿವಾದಿಯರ ಹೆಸರುಗಳಲ್ಲಿ ಹೆಚ್ಚುವರಿಯಾಗಿ ನನ್ನ ಜಮೀನನ್ನು ತೋರಿಸಲಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನನ್ನ ಖರೀದಿ ಪತ್ರ ಮತ್ತು ಪಹಣಿ ಆಧಾರದ ಮೇಲೆ ನನ್ನ ಜಮೀನು ಕಡಿಮೆ ಆಗಿರುತ್ತದೆ ಅಂತಾ ನುಡಿಯುತ್ತಿದ್ದೇನೆ. ಸದರಿ ಕಡಿಮೆ ಆದಂತಹ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯಲ್ಲಾಗಲೀ ಅಥವಾ ಸರ್ವೇ ಇಲಾಖೆಯಲ್ಲಾಗಲೀ ನಾನು ಪಹಣಿ ತಿದ್ದುಪಡಿಯನ್ನು ಮಾಡಲು ಪ್ರಯತ್ನಪಟ್ಟಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ.

12. ಸದರಿ ತಿದ್ದಪಡಿ ಮಾಡುವ ಜವಾಬ್ದಾರಿ ಕಂದಾಯ ಇಲಾಖೆ ಮತ್ತು ಸರ್ವೇ ಇಲಾಖೆಯವರದು ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ಕಂದಾಯ ಇಲಾಖೆ ಮತ್ತು ಸರ್ವೇ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ತಿದ್ದುಪಡಿ ಮಾಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಜೈರಾ ಖಾತುಂಬಿರವರು ಮರಣ ಹೊಂದಿದರೂ ಕೂಡಾ ಅವರ ಹೆಸರಲ್ಲಿ ಅವರ ಸೊಸೆ ಮುಖಾಂತರ ಖರೀದಿ ಪತ್ರ ನೊಂದಣಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಜೈರಾ ಖಾತುಂಬಿರವರ ವಾರಸುದಾರರು ಪ್ರತಿವಾದಿಯರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿಲ್ಲ, ಆದರೆ ಅವರೇ ದಾಖಲೆಗಳನ್ನು ಸೃಷ್ಟಿ ಮಾಡಿಸಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಜೈರಾ ಖಾತುಂಬಿರವರ ವಾರಸುದಾರರು ಪ್ರತಿವಾದಿಯರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿಲ್ಲ.

13. ನಮ್ಮ ತಾಯಿಯ ಮಾರಾಟಗಾರರು ಪಿ.ಎಲ್. ನರಸಿಂಹರವರ ಬಳಿ ಖರೀದಿ ಮಾಡಿದ್ದಾರೆ. ಸದರಿ ಪಿ ಎಲ್ ನರಸಿಂಹ ರವರು ಎಮ್ ಸೀತಾರಾಮದಾಸ್ ತಂದೆ ಅಚ್ಚಯ್ಯ ಇವರ ಬಳಿಯಿಂದ ಖರೀದಿ ಮಾಡಿದ್ದಾರೆ. ಸದರಿ ವ್ಯಕ್ತಿಗಳ ಹೆಸರಲ್ಲಿದ್ದ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸಾಕ್ಷಿಯನ್ನು ಪಹಣಿ ತೋರಿಸಲಾಗಿ ಅದರಲ್ಲಿ ಎಮ್ ಸೀತಾರಾಮದಾಸ್ ತಂದೆ ಅಚ್ಚಯ್ಯ ಇವರ ಹೆಸರಿಗೆ 9 ಎಕರೆ 5 ಗುಂಟೆ ಜಮೀನು ಮತ್ತು

ಜೈರಾ ಖಾತುಂಬಿ ಗಂಡ ಬಷೀರ್ ಸಾಬ ಇವರಿಗೆ ಹೆಸರಿಗೆ 12 ಎಕರೆ 8 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಪಹಣಿಯಲ್ಲಿ ಪೋಟ ಖರಾಬ ತೋರಿಸಿಲ್ಲ, ಆದರೆ ನನ್ನ ಖರೀದಿ ಪತ್ರದಲ್ಲಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಪಹಣಿಯನ್ನು ನಿಡಿ**-15** ಎಂದು ಗುರುತಿಸಲಾಯಿತು. ಸದರಿ ಪಹಣಿಯಲ್ಲಿ ಕಲಂ. 9 ರಲ್ಲಿ ಎಮ್ ಸೀತಾರಾಮದಾಸ್ ತಂದೆ ಅಚ್ಚಯ್ಯ ಇವರ ಹೆಸರಿಗೆ ಕೇವಲ 9 ಎಕರೆ 5 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ.

14. ಪಿ.ಎಲ್. ನರಸಿಂಹರವರು ಖರೀದಿಸಿದ ಖರೀದಿ ಪತ್ರದಲ್ಲಿಯೂ ಕೂಡಾ 9 ಎಕರೆ 5 ಗುಂಟೆ ಮಾತ್ರ ಇದೆ ಎಂದರೆ ಸರಿ. ಅದನ್ನು ಈಗಾಗಲೇ ನಿಡಿ-1 ಎಂದು ಗುರುತಿಸಲಾಗಿದೆ. ಪ್ರತಿವಾದಿಯರು ಖರೀದಿಸಿದ ಖರೀದಿ ಪತ್ರದಲ್ಲಿ ತೋರಿಸಿದ ಕ್ಷೇತ್ರದಲ್ಲಿ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಉದ್ದೇಶಪೂರ್ವಕವಾಗಿ ಅಳತೆ ಮಾಡಬಾರದು ಎನ್ನುವ ಉದ್ದೇಶಕ್ಕಾಗಿ ಅವರಿಗೆ ನೋಟೀಸ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನೋಟೀಸ್ ಕೊಟ್ಟ ನಂತರವು ಕೂಡಾ ನಾನು ಜಮೀನು ಅಳತೆಗಾಗಿ ಅರ್ಜಿ ಸಲ್ಲಿಸಿಲ್ಲ.

15. ನಾನು ಹಿಂದಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದೇ ನನ್ನ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂಧಪಡದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನು ಮಸ್ಕಿ-ಸಿಂಧನೂರು ರಸ್ತೆಗೆ ಹೊಂದಿಕೊಂಡು ಇದೆ ಎಂದರೆ ಸರಿ. ನನ್ನ ಜಮೀನು ಹಿಂಭಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನು ಕೂಡಾ ಮುಂಭಾಗದಲ್ಲಿ ಬರುತ್ತದೆ. ವಿನಾಕಾರಣ ಪ್ರತಿವಾದಿಯರಿಗೆ ತೊಂದರೆ ಕೊಡಲು ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.4 ರಲ್ಲಿ ಬರುವ ಎಲ್ಲ ಹಿಡುವಳಿದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಜಮೀನು ಅಭಿವೃದ್ಧಿ ಪಡಿಸಬಾರದು, ಅಳತೆ ಮಾಡಿಸಬಾರದು ಎನ್ನುವ ಉದ್ದೇಶಕ್ಕಾಗಿ ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು